'ಹಾಂ ಭಾಯಿ! ದೇವರ ದಯೆ... ಈಗ ನಾನು ಮೊದಲಿಗಿಂತ ಆರೋಗ್ಯವಂತನಾಗಿದ್ದೇನೆ. ಒಂದು ವೇಳೆ ನಾನು ಕ್ವಾರಂಟೈನ್...'

ಅವನ ಮಾತು ಇನ್ನೂ ಮುಗಿದಿರಲಿಲ್ಲ ನರಗಳು ಸೆಟೆದುಕೊಂಡವು. ಬಾಯಿಂದ ಕಫ ಬರತೊಡಗಿತು. ಕಣ್ಣು ಗುಡ್ಡೆಗಳು ಹಾಗೇ ನಿಂತವು. ಅನೇಕ ಸೆಳೆತಗಳು ಬಂದವು; ಸ್ವಲ್ಪ ಹೊತ್ತಿನ ಕೆಳಗೆ ಎಲ್ಲರಿಗೂ ಚೆನ್ನಾಗಿ ಕಾಣಿಸುತ್ತಿದ್ದ ಮತ್ತು ಸಂತೋಷವನ್ನು ಅನುಭವಿಸುತ್ತಿದ್ದ ರೋಗಿ ಇದ್ದಕ್ಕಿದ್ದಂತೆ ಶಾಶ್ವತವಾಗಿ ಮೌನಿಯಾದ. ಭಾಗು ಅವನ ಸಾವಿಗೆ ಕಣ್ಣೀರು ಸುರಿಸಿದ. ಆ ರೋಗಿಯ ಸಾವಿಗೆ ಯಾರು ತಾನೇ ಕಣ್ಣೀರು ಸುರಿಸುವವರಿದ್ದರು? ಅವನ ಸಂಬಂಧಿಕರು ಯಾರಾದರೂ ಅಲ್ಲಿದ್ದರೆ ಭಾಗುವಿನ ಕಣ್ಣೀರಿನ ಕೋಡಿಗೆ ಅವರ ಹೃದಯ ಛಿದ್ರವಾಗುತ್ತಿತ್ತು.

ಶೋಕದ ವಾತಾವರಣವನ್ನೇ ಸೋಲಿಸಿಬಿಡುತ್ತಿದ್ದ ಭಾಗು ಒಬ್ಬನೇ ಅಲ್ಲಿ ಎಲ್ಲರ ಸಂಬಂಧಿಕನಾಗಿದ್ದದ್ದು. ಎಲ್ಲರಿಗಾಗಿ ಅವನ ಹೃದಯ ಮಿಡಿಯುತ್ತಿತ್ತು. ಅವನು ಎಲ್ಲರಿಗಾಗಿ ಅಳುತ್ತಿದ್ದ ಮತ್ತು ಎಲ್ಲರಿಗಾಗಿ ಮರುಗುತ್ತಿದ್ದ... ಒಮ್ಮೆ ಆತ ದೇವರ ದೇವ ಯೇಸುವಿನ ಮುಂದೆ ಕಣ್ಣೀರಿಟ್ಟು, ತನ್ನನ್ನು ಪಾಪಿಗಳಲ್ಲಿ ನಿಕೃಷ್ಟ ಪಾಪಿಯೆಂದು ಪರಿಗಣಿಸಿ ಇಡೀ ಜಗತ್ತಿನ ಮನುಷ್ಯರ ಪಾಪವನ್ನು ಮನ್ನಿಸಬೇಕೆಂದು ಭಯಭಕ್ತಿಯಿಂದ ಕೇಳಿಕೊಂಡ.

ಅದೇ ದಿನ ಸಾಯಂಕಾಲ ಭಾಗು ನನ್ನ ಬಳಿ ಓಡಿ ಬಂದ. ಅವನ ಉಸಿರು ಕುಲುಮೆಯಂತೆ ದಹಿಸುತ್ತಿತ್ತು ಮತ್ತು ಅವನ ಧ್ವನಿ ಕರುಣಾಜನಕವಾಗಿ ನರಳುತ್ತಿತ್ತು, 'ಸ್ವಾಮೀ... ಈ ಕ್ವಾಂಟೀನ್ ಒಂದು ನರಕ... ಇದು ನರಕವೇ... ಪಾದ್ರಿ ಲೊಬೊ ಇದೇ ರೀತಿಯ ನರಕವನ್ನು ವರ್ಣಿಸುತ್ತಿದ್ದುದು'.

ನಾನು ಹೇಳಿದೆ, 'ಹೌದು ಬ್ರದರ್. ಇದು ನರಕಕ್ಕಿಂತ ಹೆಚ್ಚಿನದು. ನಾನು ಇಲ್ಲಿಂದ ಓಡಿಹೋಗುವ ಬಗ್ಗೆ ಯೋಚಿಸುತ್ತಿದ್ದೇನೆ... ಇಂದು ನನ್ನ ಆರೋಗ್ಯವೂ ಚೆನ್ನಾಗಿಲ್ಲ.'

'ಸ್ವಾಮಿ! ಇವತ್ತು ಒಬ್ಬ ರೋಗಿ ರೋಗದ ಭಯದಿಂದ ಮೂರ್ಛೆ ಹೋದ. ಅವನನ್ನು ಹೆಣ ಅಂದುಕೊಂಡು ಯಾರೋ ಅವನನ್ನು ಹೆಣದ ರಾಶಿಗೆ ಬಿಸಾಡಿದರು. ಪೆಟ್ರೋಲ್ ಚಿಮುಕಿಸಿ ಹೆಣಗಳ ರಾಶಿಗೆ ಬೆಂಕಿ ಹಚ್ಚಿದರು. ಬೆಂಕಿ ಆವರಿಸಿ ಎಲ್ಲರನ್ನು ತನ್ನ ತೆಕ್ಕೆಗೆ ತೆಗೆದುಕೊಂಡಾಗ, ಆತ ಬೆಂಕಿಯಲ್ಲಿ ತನ್ನ ಕೈಕಾಲು ಆಡಿಸುತ್ತಿರುವುದನ್ನು ನೋಡಿ ನಾನು ಬೆಂಕಿಗೆ ಜಿಗಿದು ಆತನನ್ನು ಆಚೆಗೆ ಎಳೆದುಕೊಂಡೆ. ಸ್ವಾಮೀ, ಅವನು ಬಹುತೇಕ ಸುಟ್ಟು ಹೋಗಿದ್ದ... ಅವನನ್ನು ರಕ್ಷಿಸುವಾಗ ನನ್ನ ಬಲಗೈ ಸಂಪೂರ್ಣವಾಗಿ ಸುಟ್ಟು ಹೋಯಿತು.'

ನಾನು ಭಾಗುವಿನ ಬಲ ಭುಜವನ್ನು ನೋಡಿದೆ. ಒಳಗಿನಿಂದ ಹಳದಿ ಬಣ್ಣದ ಹಸಿ ಮಾಂಸಖಂಡ ಕಾಣಿಸುತ್ತಿತ್ತು. ಅದನ್ನು ನೋಡಿ ನಾನು ಸಂಪೂರ್ಣವಾಗಿ ನಡುಗಿಹೋದೆ... 'ಹಾಗಾದ್ರೆ ಆ ವ್ಯಕ್ತಿ ಬದುಕಿ ಉಳಿದನೇ?' ಎಂದು ಕೇಳಿದೆ.

'ಸ್ವಾಮಿ. ಆತ ಬಹಳ ಸಭ್ಯ ವ್ಯಕ್ತಿ. ಪ್ರಪಂಚ ಅವನ ಒಳ್ಳೆಯತನ ಮತ್ತು ಪ್ರಾಮಾಣಿಕತೆಯ ಲಾಭವನ್ನು ಪಡೆಯಲಿಲ್ಲ. ಆ ಹೃದಯವಿದ್ರಾವಕ ಸ್ಥಿತಿಯಲ್ಲೂ ಆತ ತನ್ನ ಸುಟ್ಟು ಕರಕಲಾದ ಮುಖವನ್ನು ಮೇಲೆತ್ತಿ ತನ್ನ ದುರ್ಬಲ ಕಣ್ಣಿನಿಂದ ನನ್ನ ಕಣ್ಣುಗಳನ್ನು ನೋಡಿ ನನಗೆ ಧನ್ಯವಾದ ಹೇಳಿದ.' ಎಂದ ಭಾಗು ಮತ್ತೆ ಮುಂದುವರಿಸಿದ: 'ಇದಾದ ಸ್ವಲ್ಪ ಹೊತ್ತಿನ ನಂತರ ಅವನು ಎಷ್ಟು ನರಳಿದನೆಂದರೆ ಈ ತನಕ ನಾನು ಅವನ ಹಾಗೆ ನರಳಿ ಸತ್ತ ಯಾವ ರೋಗಿಯನ್ನೂ ನೋಡಿಲ್ಲ. ನಂತರ ಆತ ಸತ್ತು ಹೋದ. ಬಹುಶಃ ನಾನು ಅವನಿಗೆ ಆಗಲೇ ಸುಟ್ಟು ಹೋಗಲು ಬಿಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು... ಅವನು ಇನ್ನೂ ನೋವು ಅನುಭವಿಸಲಿ ಎಂದು ಅವನನ್ನು ಬದುಕಿಸಿದಂತಾಯಿತು. ಮತ್ತೆ ಆತ ಉಳಿಯಲೂ ಇಲ್ಲ. ಈ ನನ್ನ ಸುಟ್ಟ ಕೈಗಳಿಂದಲೇ ಅವನನ್ನು ಅದೇ ಬೆಂಕಿಯ ಹೆಣದ ರಾಶಿಗೆ ಎಸೆದು ಬಂದಿದ್ದೇನೆ.'